ಮಟ್ಟ ಭಾರತಕ್ಕಿಂತ ಉತ್ತಮವಾಗಿತ್ತು. ಅಬ್ರಾಹಮ್‌ಗೆ ಚರ್ಚ್ ಮೂಲಕ ಮನೆ, ಕಾರು ಮತ್ತು ಒಬ್ಬ ಡ್ರೈವರನನ್ನು ಒದಗಿಸಲಾಗಿತ್ತು. ಒಬ್ಬ ಕ್ರೈಸ್ತ ಗುರುಗಳ ಸಂಪರ್ಕಕ್ಕೆ ಅನೇಕ ಜನರು ಬರುತ್ತಾರೆ. ಆ ಸಂಪರ್ಕದಿಂದ ನನಗೆ ಮೋಮ್ಬಾಸಾದಲ್ಲಿ ನಡೆಯುತ್ತಿದ್ದ ಒಂದು ಇಂಡಿಯನ್ ಇಂಟರ್‌ನ್ಯಾಶನಲ್ ಸ್ಕೂಲ್‌ನಲ್ಲಿ ಕಂಪ್ಯೂಟರ್ ಟೀಚರ್ ನೌಕರಿ ಸಿಕ್ಕಿತು; ಇಲ್ಲಿ ಸಿಬಿಐ ಪಠ್ಯಕ್ರಮದಂತೆ ಬೋಧಿಸಲಾಗುತ್ತಿತ್ತು. ನಾನು ಕಂಪ್ಯೂಟರ್ ಟೀಚರ್ ಎಂದು ನೇಮಕಗೊಂಡಿದ್ದೆ, ಆದರೆ ನಾನು ಇನ್ನಿತರ ವಿಷಯಗಳನ್ನು ಸಹ ಬೋಧಿಸುತ್ತಿದ್ದೆ. ವಿದ್ಯಾರ್ಥಿಗಳು ನನ್ನ ಪಾಠವನ್ನು ಮೆಚ್ಚಿಕೊಂಡರು. ನಾನು ಅವರ ಪ್ರೀತಿಯ ಟೀಚರ್ ಎಂದು ಹೆಸರುವಾಸಿಯಾದೆ. ಎಲ್ಲರೂ, 'ನ್ಯಾನ್ಸಿ ಟೀಚರ್ ಬೇಕು... ನ್ಯಾನ್ಸಿ ಟೀಚರ್ ಬೇಕು' ಎಂದು ಹೇಳುತ್ತಿದ್ದರು. ಇದು ನನ್ನೊಳಗೆ ಒಂದು ವಿಧದ ಆತ್ಮವಿಶ್ವಾಸ, ನಿಜ ಹೇಳಬೇಕೆಂದರೆ ಒಂದು ರೀತಿಯಲ್ಲಿ ಅಹಂಕಾರವನ್ನೇ ಹುಟ್ಟು ಹಾಕಿತು. ನನ್ನ ನಿಜ ಜೀವನದೊಂದಿಗೆ ನನ್ನ ಉದ್ಯೋಗದ ಜೀವನ ಸಹ ಆರಂಭವಾಯಿತು. ನಾನೂ ಸಹ ಜಗತ್ತಿನ ನೌಕರವರ್ಗದವರ ಸಾಲಿಗೆ ಸೇರಿದೆ.

'ಆತ್ಮನಿರ್ಭರತೆ ತುಂಬಾ ಮಹತ್ವದ್ದು. ಜೀವನದಲ್ಲಿ ಯಾವಾಗ, ಏನಾಗುವುದೆಂದು ಗೊತ್ತಾಗುವುದಿಲ್ಲ.'

'ಪಾಲ್, ನೀವು ಸರಿಯಾಗಿಯೇ ಹೇಳಿದಿರಿ... ಜೀವನದಲ್ಲಿ ಆತ್ಮನಿರ್ಭರತೆ ತುಂಬಾ ಅವಶ್ಯಕ. ಮನುಷ್ಯ ಇನ್ನೊಬ್ಬರನ್ನು ಆಶ್ರಯಿಸದೆ ಆತ್ಮನಿರ್ಭರ ಮತ್ತು ಆತ್ಮವಿಶ್ವಾಸಿಯಾಗಬೇಕು. ಆತ್ಮಸಹಾಯವೇ ಜೀವನದ ಮೂಲ ಸಿದ್ಧಾಂತವಾಗಬೇಕು. ಆದರೂ ಜೀವನದಲ್ಲಿ ನಾವು ಆರ್ಥಿಕವಾಗಿ ಇನ್ನೊಬ್ಬರನ್ನು ಅವಲಂಬಿಸಬೇಕಾದ ಸಂದರ್ಭಗಳು ಬರುತ್ತವೆ. ಹೋಗಲಿ ಬಿಡಿ, ಈ ಬಗ್ಗೆ ಮುಂದೆ ಚರ್ಚಿಸುತ್ತೇನೆ. ಈಗ ಆಫ್ರಿಕಾದ ಸಂಗತಿಯನ್ನು ಹೇಳುತ್ತೇನೆ.'

'ಸರಿ.'

ನಾವು ಹೊಸ ಹೊಸ ಪಾತ್ರಧಾರಿಗಳನ್ನು ಭೇಟಿಯಾಗುತ್ತಿದ್ದೆವು. ಹೊಸಹೊಸ ಸಂಗತಿಗಳು ಘಟಿಸುತ್ತಿದ್ದವು. ಹೊಸಹೊಸ ಸಂಪರ್ಕಗಳು ಬೆಳೆದವು. ಅಪರಿಚಿತರೊಂದಿಗೆ ನಮ್ಮ ಸಂಪರ್ಕ ಹೆಚ್ಚಿತು. ಆಫ್ರಿಕಾದಲ್ಲಿ ಚಿತ್ರವಿಚಿತ್ರ ಪದ್ಧತಿಗಳು, ನಾನಾ ರೀತಿಯ ವಸ್ತುಗಳು, ನಾನಾ ವಿಧದ ಜನರು, ಹೊಸ ಜೀವನ... ಕಪ್ಪುಬಿಳಿಯರ ನಡುವೆ ಸಿಲುಕಿದ್ದ ನಾವು ಆರಂಭದಲ್ಲಿ ಹೆದರಿದೆವು, ಆಶ್ಚರ್ಯಗೊಂಡೆವು. ಆದರೆ ಶೀಘ್ರವೇ ಇಲ್ಲಿಯ ಪರಿಸ್ಥಿತಿಗಳಿಗೆ ಹೊಂದಿಕೊಂಡೆವು. ಆಫ್ರಿಕಾದ ಇತಿಹಾಸ, ಆಫ್ರಿಕಾದ ಸೌಂದರ್ಯ, ಕುರೂಪ ಮತ್ತು ಅಸಂಬದ್ಧತೆಯ ಬಗ್ಗೆ ಅರಿತೆವು. ಬಹುಸಂಸ್ಕೃತಿಯ ನಗರ ಮೋಮ್ಬಾಸಾದ ಸಂಸ್ಕೃತಿಯಲ್ಲಿ ವಿಭಿನ್ನ ಸಂಸ್ಕೃತಿಗಳು ಮೇಳೈಸಿದ್ದವು. ಬ್ರಿಟಿಷ್, ಏಷ್ಯಾ, ಅರಬ್ಬಿ, ಓಮಾನಿಸ್, ಭಾರತೀಯ ಮತ್ತು ಚೀನಿ ಅನಿವಾಸಿಯರು ಈ ನಗರದ ವಾಸ್ತುಕಲೆ ಮತ್ತು ವ್ಯಂಜನಗಳನ್ನು ಸಮೃದ್ಧಗೊಳಿಸಿದ್ದರು.

ನಾವು ಸ್ಥಳೀಯ ಸಂತೆಗಳಲ್ಲಿ ಅಡ್ಡಾಡುತ್ತಿದ್ದೆವು. ಟೌನ್‌ಹಾಲ್‌ನಲ್ಲಿ ಚೈನೀಸ್ ಆಹಾರವನ್ನು ಸೇವಿಸುತ್ತಿದ್ದೆವು, ನ್ಯಾಲಿ ಸಿನಿಮ್ಯಾಕ್ಸ್‌ನಲ್ಲಿ ಹಾಲಿವುಡ್ ಮತ್ತು ಬಾಲಿವುಡ್ ಸಿನಿಮಾಗಳನ್ನು ನೋಡುತ್ತಿದ್ದೆವು. ನ್ಯಾಲಿ ಬ್ರಿಡ್ಜ್ ದಾಟುವಾಗ ಫೋಟೊ ತೆಗೆದುಕೊಳ್ಳುವುದನ್ನು ಮರೆಯುತ್ತಿರಲಿಲ್ಲ. ನಮ್ಮ ಮೂಗಿನ ಹೊಳ್ಳೆಗಳಿಗೆ ಓಲ್ಡ್ ಟೌನಿನ ಸುಗಂಧಿತ ಮಸಾಲೆಗಳ ಕಂಪು ಘೇರಾಯಿಸುತ್ತಿತ್ತು. ನಮಗೆ ಇಷ್ಟವಿಲ್ಲದಿದ್ದಾಗ್ಯೂ ಅಲ್ಲಿ ಕಲೆತಿದ್ದ ಪಂಕ್ತಿಯಲ್ಲಿ ನಿಲ್ಲುತ್ತಿದ್ದೆವು.

'ಮಸಾಲೆಗಳು ಮನೆಯಲ್ಲಿ ಬೇಕಾದಷ್ಟು ಬಿದ್ದಿವೆ... ಕಳೆದ ಬಾರಿ ಕೊಂಡ ಪ್ಯಾಕೆಟ್‌ಗಳನ್ನು ಇನ್ನೂ ಓಪನ್ ಸಹ ಮಾಡಿಲ್ಲ' ಅಬ್ರಾಹಮ್ ಸಿಡಿಮಿಡಿಗೊಳ್ಳುತ್ತಿದ್ದ. ಆದರೆ ನಾನು ಪಂಕ್ತಿಯಲ್ಲಿ ನಿಲ್ಲುವ ಮೋಹದಿಂದ ತಪ್ಪಿಸಿಕೊಳ್ಳದೆ, ಮಸಾಲೆಗಳ ಇನ್ನಷ್ಟು ಪ್ಯಾಕೆಟ್‌ಗಳನ್ನು ಕೊಳ್ಳುತ್ತಿದ್ದೆ.

ಒಮ್ಮೊಮ್ಮೆ ನಾವು ಜನಭರಿತ ರೇವುಪಟ್ಟಣಗಳಲ್ಲಿ ಪಿಕ್‌ನಿಕ್ ಮಾಡುತ್ತಿದ್ದೆವು. ನಗರದಿಂದ ಹೊರಗಿದ್ದ, ವನ್ಯಜೀವಿಗಳ ಪಾರ್ಕ್‌ನಲ್ಲಿ ಸಫಾರಿ ಮಾಡಲು ಹೋಗುತ್ತಿದ್ದೆವು. ಹಳ್ಳಿಗಳು ಮತ್ತು ಭಗ್ನಾವಶೇಷಗಳಲ್ಲಿ ಪುರಾತನ ಮಾನವನ ನೆಲೆಗಳನ್ನು ತಡವರಿಸುತ್ತಿದ್ದೆವು. ಪ್ರಕೃತಿಯ ವೈವಿಧ್ಯತೆ, ಪರಿವರ್ತನೆ ಮತ್ತು ಪ್ರಚಂಡ ಶಕ್ತಿಯನ್ನು ನೋಡಿ ಆಶ್ಚರ್ಯಪಡುತ್ತಿದ್ದೆವು.

ಆಫ್ರಿಕಾದ ವ್ಯಂಜನಗಳಾದ ಉಗಾಲಿ, ವಾಲಿ, ಪುಲಾವ್... ನಮ್ಮ ನಿತ್ಯ ಬದುಕಿನ ಭಾಗಗಳಾಗಿದ್ದವು. ಇಲ್ಲಿಗೆ ಬಂದ ನಂತರ ಕೆಲವರೊಂದಿಗೆ ನಮ್ಮ ಸಾಮಾಜಿಕ ನೆಟ್‌ವರ್ಕ್ ನೆಲೆಗೊಂಡಿತು; ಅವುಗಳನ್ನು ನಾನು ಮೂರು ಭಾಗಗಳಲ್ಲಿ ವಿಂಗಡಿಸಬಲ್ಲೆ. ಕೆಲವು ಭಾರತೀಯರೊಂದಿಗೆ ನಾವು ಕಲೆಯುತ್ತಿದ್ದೆವು. ಇಲ್ಲಿ ಅಬ್ರಾಹಮ್‌ನ ಮಾವ–ಅತ್ತೆ ಇದ್ದರು. ಆರಂಭದಲ್ಲಿ ಅವರ ಮನೆಗೆ ಹೆಚ್ಚುಹೆಚ್ಚು ಹೋಗುತ್ತಿದ್ದೆವು, ಆಗ ನಮಗೆ ಇಲ್ಲಿ ಬೇರೆ ಮಿತ್ರರಿರಲಿಲ್ಲ. ಹೀಗಾಗಿ ಅವರು ಮಾತ್ರ ನಮ್ಮವರಾಗಿದ್ದರು. ಆದರೆ ಕ್ರಮೇಣ ನಾವು ಇಲ್ಲಿ ಬೇರೂರಿದಾಗ, ಜನರೊಂದಿಗೆ ನಮ್ಮ ಗೆಳೆತನ ಚಿಗುರಿತು, ಮಾವ–ಅತ್ತೆಯ ಮನೆಗೆ ಹೋಗುವುದನ್ನು ಕಡಿಮೆ ಮಾಡಿದೆವು, ತದನಂತರ ಬಿಟ್ಟೇ ಹೋಯಿತು.

ನಮ್ಮ ಮಿತ್ರರ ಇನ್ನೊಂದು ಗುಂಪು ನಮ್ಮ ಶಾಲೆಯ ಅಧ್ಯಾಪಕರಾಗಿದ್ದರು. ಮೂರನೆ ಗುಂಪು ಚರ್ಚ್‌ಗೆ ಸಂಬಂಧಿಸಿದವರಾಗಿದ್ದರು. ಫಾದರ್ ಡಿಸೋಜಾ, ಅವರ ಆಫ್ರಿಕನ್ ಹೆಂಡತಿ ಗ್ಲೋರಿಯಾ ನಮಗೆ ಆದರ್ಶವಾಗಿದ್ದರು. ಚರ್ಚ್‌ಗೆ ಬರುವ ಯುವತಿಯರಾದ ರೋಜ್, ಮರ್ಸಿ, ಬೆಲಿಂಡಾ, ಮಾರ್ಯಾ ನನ್ನ ಗೆಳತಿಯರಾದರು. ರವಿ ಹೆಸರಿನ ಯುವ ಫಾದರಿಯೊಂದಿಗೆ ನಮ್ಮ ಪರಿಚಯವಾಯಿತು. ರವಿ ಮೋಮ್ಬಾಸಾದಲ್ಲಿ ಬೇರೊಂದು ಚರ್ಚ್‌ನಲ್ಲಿ ಪಾದರಿಯಾಗಿದ್ದರು. ಅವರ ಹೆಂಡತಿ ಸೈನಲಿ ಮೂಲದಲ್ಲಿ ಚೀನಿಯಳಾಗಿದ್ದಳು. ರವಿಯ ಅಜ್ಜ ತಮಿಳುನಾಡಿನಿಂದ ಹೋಗಿ ಸಿಂಗಾಪುರದಲ್ಲಿ ನೆಲೆಸಿದ್ದರು, ಅಲ್ಲಿ ಕ್ರಿಶ್ಚಿಯಾನಿಟಿಗೆ ಕನ್ವರ್ಟ್ ಆಗಿದ್ದರು. ರವಿ ಮತ್ತು ಸೈನಲಿ ಇಬ್ಬರೂ ಸಿಂಗಪುರದವರಾಗಿದ್ದರು, ಇವರ ಜೋಡಿ ಆದರ್ಶವಾಗಿತ್ತು. ಅವರಿಗೆ ನಮ್ಮ ಜೋಶುಆ ವಯಸ್ಸಿನ ಒಬ್ಬ ಪುತ್ರನಿದ್ದ. ರವಿ ಮತ್ತು ಸೈನಲಿ ನಮ್ಮ ವಿಭಿನ್ನ ಮಿತ್ರರಾದರು.

ನಾನು ಅಧ್ಯಾಪಕಿ, ನನ್ನ ಪತಿ ಮಿಶನರಿ, ಒಬ್ಬ ಸುಂದರ ಪುತ್ರ, ಉತ್ತಮ ಸ್ನೇಹಿತರು... ಇದಕ್ಕಿಂತ ಮಿಗಿಲಾಗಿ ಮನುಷ್ಯನಿಗೆ ಇನ್ನೇನು ತಾನೇ ಬೇಕು! ಹಾಂ, ಇಲ್ಲಿಯೂ ನಾನು ಮನೆಯಲ್ಲಿ ಅಲೊವೆರಾ ಗಿಡಗಳನ್ನು ಹಾಕಿದೆ. ಇಲ್ಲಿ ಅದರ ಭಿನ್ನಭಿನ್ನ ಪ್ರಜಾತಿಗಳಿದ್ದವು. ಹಸುರು, ಸ್ಲೇಟಿ, ಹಸುರು–ಸ್ಲೇಟಿ ಹೀಗೆ... ಅನೇಕ ಪ್ರಜಾತಿಗಳ ಗಿಡಗಳನ್ನು ನನ್ನ ಮನೆಯ ಗಾರ್ಡನ್‌ನಲ್ಲಿ ಬೆಳೆದೆ.

ಇಲ್ಲಿ ಸಹ ನಮ್ಮ ಮನೆ ಸಮುದ್ರತೀರಕ್ಕೆ ಅಂಟಿಕೊಂಡಂತೆ ಚರ್ಚ್‌ನ ಪರಿಸರದಲ್ಲಿತ್ತು. ಬಿಳಿ ಮರಳು ಮತ್ತು ನೀಲಿ ನೀರು ಜೀವಂತವಾಗಿರುವಂತೆ ತೋರುತ್ತಿತ್ತು. ಚರ್ಚ್‌ನ ವಿಶಾಲ ಕೋಣೆಯಲ್ಲಿ ಕಾಷ್ಠ ಕಲೆ ಸೂಕ್ಷ್ಮವಾಗಿದ್ದು, ತುಂಬಾ ಸುಂದರವಾಗಿತ್ತು; ಇದನ್ನು ನೋಡಿದಾಗ ಚಂಚಲ ಮನಸ್ಸಿಗೆ ನೆಮ್ಮದಿ ಲಭಿಸುತ್ತಿತ್ತು. ಇಲ್ಲೂ ಸಹ ನಾನು ಸಮುದ್ರದಲ್ಲಿ ಈಜುವುದನ್ನು ಮುಂದುವರೆಸಿದೆ. ಇಲ್ಲಿಯ ಸಮುದ್ರದ ನೀರು ಕೇರಳದಂತೆಯೇ ಉಪ್ಪು ಮತ್ತು ಬೆಚ್ಚಗಿತ್ತು.

ಆದರೆ ನನ್ನ ಘೋರ ದುರದೃಷ್ಟ, ಅಬ್ರಾಹಮ್ ಇಲ್ಲಿ ಸಹ ಮಹಿಳೆಯರ ಹಿಂದೆ ಬಿದ್ದಿದ್ದ. ಇಲ್ಲಿಗೆ ಬಂದು ಒಂದು ಇಂಟರ್‌ನ್ಯಾಷನಲ್ ಚರ್ಚ್‌ನಲ್ಲಿ ಫಾದರಿಯಾದ ನಂತರ ಅವನಿಗೆ ಮತ್ತಷ್ಟು ದರ್ಪ ಬಂದಿತ್ತು. ಅದೊಂದು ಮಧ್ಯಾಹ್ನ, ನನ್ನ ಮನೆಯಲ್ಲಿ ಮಹಿಳೆಯರ ಬೆತ್ತಲೆ ಚಿತ್ರಗಳನ್ನು ನೋಡಿ ನನ್ನ ಮನಸ್ಸು ಮತ್ತೆ ಚೂರು ಚೂರಾಯಿತು. ಮನಸ್ಸಿನಲ್ಲಿ ಗಾಢ ವಿಷಾದ ಆವರಿಸಿತು. ಕಣ್ಣುಗಳು ತುಂಬಿ ಬಂದವು. ಅಬ್ರಾಹಮ್ ಹಿಂದಿನದನ್ನು ಇಲ್ಲೂ ಮುಂದುವರೆಸಿದ. ನಾನು ಜಿಗುಪ್ಸೆಯಿಂದ ನರಳಿದೆ, ಸಿಟ್ಟಿನಿಂದ ಬೆಂಕಿಯಾದೆ. ಮೊದಲು ಅವನು ಗೋಧಿ ಬಣ್ಣದ ಇಂಡಿಯನ್ ಮಹಿಳೆಯರ ಬಳಿಗೆ ಹೋಗುತ್ತಿದ್ದ, ಈಗ ಕಪ್ಪು ಆಫ್ರಿಕನ್, ಬಿಳಿ, ಕಂದು ಬಣ್ಣ – ಹೀಗೆ ನಾನಾ ವಿಧದ ಮಹಿಳೆಯರು ಅವನಿಗೆ ಸಿಕ್ಕಿದ್ದರು.

ಹೊಸ ಹೊಸ ಮಹಿಳೆಯರೊಂದಿಗೆ ಅಬ್ರಾಹಮ್‌ನ ಸಂಬಂಧ ಬೆಳೆಯುತ್ತಿತ್ತು. ಅವನ ಲೈಂಗಿಕ ಆಸಕ್ತಿ ಹೆಚ್ಚುತ್ತಿತ್ತು. ಈಗ ಅವನು ಚರ್ಚ್‌ನ ಒಬ್ಬ ನನ್‌ನೊಂದಿಗೂ ಸಂಪರ್ಕ ಇಟ್ಟುಕೊಂಡಿದ್ದ.

'ಹಾಲೆಲುಯಿಯಾ! ಆದರೆ ನಿಮಗೆ ಹೇಗೆ ತಿಳಿಯಿತು?'

'ಅವಳು ನನ್ನಿಂದ ದೂರವಿರುತ್ತಿದ್ದಳು, ನನ್ನೆದುರು ಬಂದಾಗ ಗಾಬರಿಗೊಳ್ಳುತ್ತಿದ್ದಳು.'

'ಸಂದೇಹಪಡಲು ಈ ಕಾರಣ ಸಾಲದು.'

'ಪಾಲ್, ಕೆಲವು ವಿಷಯಗಳನ್ನು ನಾವು ವ್ಯಕ್ತಪಡಿಸಲಾರೆವು, ಆದರೆ ಅರ್ಥ ಮಾಡಿಕೊಳ್ಳಬಲ್ಲೆವು, ಅನುಭವಿಸಬಲ್ಲೆವು. ಅವಳ ಹಾವಭಾವವನ್ನು ಗಮನಿಸಿದಾಗ, ಅಬ್ರಾಹಮ್ ಮತ್ತು ಅವಳ ನಡುವೆ ಸಂಬಂಧವೇರ್ಪಟ್ಟಿದೆ ಎಂದು ನನಗೆ ನಂಬಿಕೆ ಬಂತು.'